# ದಕ್ಷಿಣ ದಿಕ್ಕಿನ ಒಂದಷ್ಟು ಗಾಳಿ

## ಘಾನಾ ದೇಶದ ಕತೆ

■ ಮೂಲ: **ಆಮಾ ಆತಾ ಅಯ್ದೂ**
■ ಅನುವಾದ: **ಜಯಶ್ರೀ ಕಾಸರವಳ್ಳಿ**



ಗತಿಯಿಲ್ಲದೆ, ಅತಿ ದರಿದ್ರ ಸ್ಥಿತೀಲಿ ಗುಪ್ಪೆ ಬಿದ್ದಿದ್ದ ಕೋಲಾದ ಕರಟುಕಾಯಿಗಳ ರಾಶಿ ಕಂಡು, ಅಸನಮ್ಮ ಕ್ಯಾಕರಿಸಿ ತುಪ್ಪಿ, ಬಿದಿರಿನ ಬುಟ್ಟೀನಾ ಎತ್ಕೊಂಡಳು. ಆಮೇಲದನ್ನು ಕೆಳಗಿಟ್ಟು, ಕರಟು ಕಾಯಿಗಳಲ್ಲೊಂದನ್ನೆತ್ತಿ ಕಚ್ಚಿದವಳೇ ಎಸೆದು, ತುಪ್ಪುತ್ತಾ ಎದ್ದು ನಿಂತಳು. ಮೊದ್ಲು, ಸಣ್ಣಗೆಂದ್ರೆ ತೀರಾ ಸಣ್ಣಗಿನ ತೀಕ್ಷ್ಣ ನೋವೊಂದು ಎಡ ಕಿವಿಯ ಕೆಳಗಿನಲ್ಲೆಲ್ಲಿಂದಲೋ ಚಿಟಿಚಿಟಿ ಸಿಡಿಯುತ್ತಾ ಕಾಣಿಸಿಕೊಂಡಿತು. ಮರುಕ್ಷಣ ಅವಳ ಕಣ್ಣುಗಳೂ ಮಂಜಾದವು.

'ಅಲ್ ಬಿದ್ದಿರೋ ಕಟ್ಗೆ ತುಂಡುಗ್ಳನ್ನ ಒಟ್ಟ್ ಹಾಕ್ಕಂಡ್‌ಬಿಡ್ಬೇಕು,' ಅಂದ್ಕೊಂಡು, ತನ್ನ ಕಣ್ಣುಗಳು ಮಂಜಾಗುತ್ತಿರೋದು ಗಾಳಿಯಲ್ಲಿನ ಥಂಡಿಗಿರಬೇಕೆಂದು ಯೋಚಿಸ್ತಾ ಕರಟುಕಾಯಿಗಳ ಮುಂದೆ ನಿಂತಳು.

'ಈ ಹುಲ್ಲುಗಾವಲ್ನಲ್ಲಿ ಯಾವ ದುಷ್ಟರ ಕಣ್ಣುಗಳ್ ಇದ್ಕೇ ಕದ್ದ್ ಹೊಂಚ್ ಹಾಕ್ತಾ ದೂಳೆಬ್ಬಿಸ್ತಿದ್ಯೋ! ಆದಷ್ಟು ಬೇಗ ಇದ್ನಾ ನಾ ಎತ್ಕೊಂಬೇಕು.'

ತನ್ನ ದೊಡ್ಡಿಗೆ ಹಿಂತಿರುವಾಗ ಹಳೇ ಗುಂಡಿಯ ಸುತ್ತ ವಿಶೇಷವಾಗಿ ದುಂಡಗೆ ಗುರ್ತು ಹಾಕಿದ್ದು ಅವಳ ಕಣ್ಣಿಗೆ ಬಿತ್ತು. ಮೊದಲಿನ ಕಾಲವಾಗಿದ್ರೆ ಇಂತಾ ಸಮಯದಲ್ಲಿ, ಇನ್ನೇನು ಮುಗಿದುಹೋಗುತ್ತಿರೋ ಋತುವಿನ ಅಳಿದುಳಿದದ್ದನ್ನೆಲ್ಲಾ ದೋಚ್ಕೊಳ್ಳೋಕ್ಕೆ ಅವ್ರೆಲ್ರೂ ಹೆಚ್ಚೂಕಮ್ಮಿ ಮುಗಿಬೀಳ್ತಾಯಿದ್ರೇನೋ; ಇಂತಹಾ ಗುಂಡಿಗಳನ್ನು ಕಾಣೋದಂದ್ರೆ ಒಂತರಾ ಲೈಂಗಿಕ ರೋಮಾಂಚವನ್ನ ಅನುಭವಿಸಿದ ಹಾಗೆ, ಒಂಬತ್ತು ತಿಂಗಳಲ್ಲಿ ತನ್ನ ತುಂಬು ಗರ್ಭಿಣಿ ಹೆಂಡ್ತಿಯನ್ನು ಕಂಡ್ ಗಂಡು ಹೆಂಗೆಲ್ಲಾ ಅನುಭವಿಸ್ತಾ ಇರಬಹುದೂಂತಾ ನಾವ್ ಕಲ್ಪಿಸಿಕೊಳ್ತಿತ್ತೀರ್ವಲ್ಲಾ ಹಂಗೆ.

ಬಸಿರು—ಹುಟ್ಟು—ಸಾವು ಮತ್ತು ನೋವು; ಮತ್ತೆ ಸಾವು... ಮತ್ತೆಂದೂ ಬಸಿರಿಲ್ಲವೆಂದ್ರೆ, ಮತ್ತೆಂದೂ ಹುಟ್ಟಿಲ್ಲ, ಹಂಗಾಗಿ ಮತ್ಯಾವ ಸಾವೂ ಇಲ್ಲ. ಆದ್ರೆ ಸಾವೊಂದೇ ನಿಜ, ಹಂಗೇ ನೋವೊಂದೇ.

'ಹೊಸ ಹೆಣವೊಂದನ್ನು ತೋರ್ಸು ತಂಗೀ, ನಿನಗಾಗಿ ಹಳೇ ಕಣ್ಣೀರನ್ನಾ ಹರ್ಸುವೆ..'

ಅವಳ ಹೊಟ್ಟೆಯಾಳದಲ್ಲಿ ಹೊರಟ ತಣ್ಣಗಿನ ಕಂಪನ ಗರ್ಭದೊಳ್ಗೂ ಸಂಚರಿಸಿದಂತಾಗಿ ಬಾಗಿಲ ಮ್ಯಾಲೆ ಒರಗಿದಳು. ಇಪ್ಪತ್ತು ವರ್ಷಗಳಲ್ಲಿ ಹುಸೇನಿಯದೊಂದೇ ಬಸಿರು, ಅದೊಂದೇ ಹುಟ್ಟು. ಇಪ್ಪತ್ತು ವರ್ಷಗಳು, ಮೊಟ್ಟ ಮೊದಲ ಮಗು ಮತ್ತು ಒಂದೇ ಗಂಡು! ಹಳೇಗಾಲದಲ್ಲಿ ಬೇಕಾದಷ್ಟು ಗಂಡು ಜಿಂಕೆಗಳಿದ್ದು, ಹೆರಿಗೆ ಸಮಯಗಳಲ್ಲಿ ಹೆಣ್ಣುಗಳನ್ನ ಚಿಗರೆಮರಿಗಳಂತೆ ಒದಗಿಸಿ ಉಗಿಸಿಕೊಂಡವ್ರೂ ಇದ್ದರು. ಆದ್ರೆ ಈಗಿನ ಕಾಲದಲ್ಲಿ ಕೀಳು ಕಳ್ಳ ಬೇಟೆಗಾರ್ರು ಸರಕಾರೀ ಮೀಸಲು ಪಡೆಯೊಳ್ಗೆ ದುರಾಕ್ರಮಿಸಿ ಶೋಚನೀಯ ಸ್ಥಿತಿಯಲ್ಲಿರೋ ಆ ನಿರ್ಭಾಗ್ಯ ಹೆಣ್ಣು ಹುಲ್ಲೆಮರಿಗಳನ್ನ ಸದ್ದಿಲ್ಲದೇ ಕದ್ದು ಹಾರ್ಸಿಬಿಡುತ್ತಾರೆ! ಹೌದು, ಅವ್ರೂ ಹುಲ್ಲೆಮರಿಗಳ್ನಾ ಚಪ್ಪರ್ಸಿ ಮೆಲ್ಲುವ ಆ ದಕ್ಷಿಣದವ್ರ ಮನೆಗಳ್ಗೂ ಕದ್ದು ಸಾಗಿಸಿಬಿಡ್ತಾರೆ.

ಹಿಂದಿನ ಕಾಲದಲ್ಲಿ ಹೆಂಗೆ ಕಾಲ ಓಡ್ತಿತ್ತು, ಮತ್ತೆ ಅದೆಷ್ಟು ಬೇಗ ವಯಸ್ಸೂ ಸರಿದು ಹೋಗ್ತಿತ್ತು. ಆದ್ರೆ, ಆಗ, ಮೊಮ್ಮಕ್ಕಳು ಬರೋ ಕಾಲಕ್ಕೆ ಮತ್ತೆ ಚಿಕ್ಕವರಾಗ್ಬೇಕೂಂತಾ ಯಾರಾದ್ರೂ ಅಪೇಕ್ಷಿಸುತ್ತಿದ್ದದುಂಟೇ? ಮೊಮ್ಮಗನನ್ನು ಕರುಣಿಸಿದ್ದಕ್ಕೆ ಅಲ್ಲಾಹ್‌ನನ್ನು ಕೊಂಡಾಡ್ಬೇಕು.

ಅವಳು ಕೋಣೆಗೆ ಹಿಂತಿರುಗಿದ ಮೇಲೂ ಬೆಂಕಿ ಜೋರಾಗಿಯೇ ಉರೀತ್ತಿತ್ತು. ಅಸನಮ್ಮ ಕರಟುಕಾಯಿಗಳನ್ನ ಕೆಳಗಿಟ್ಟಳು. ಕೊಕ್ಕರೆಯಂತೆ ಕುತ್ತಿಗೆಯನ್ನು ಮೂಲೆವರ್ಗೂ ಚಾಚಿದಳು. ಕಡೇಪಕ್ಷ, ಮುಂದಿನ ಒಂದು ವಾರದವರೆಗೂ ದೂಡಕ್ಕೆ ಆ ಕಟ್ಟಿಗೆಗಳು ಸಾಕಾಗ್ತವೆ. ಸಂಜೆಯ ಮತ್ತುಳಿದ ಹೊತ್ತಿನಲ್ಲಿ ಅವಳು ನಾಳೆಯ ವ್ಯಾಪಾರಕ್ಕೆ ತಯಾರಿ ಮಾಡಿಕೊಳ್ಳುತ್ತಾ ಕೂತಳು.

ಸಂಜೆಯ ಪ್ರಾರ್ಥನೆಯೂ ಆಯ್ತು. ದುಡ್ಡು ಚೀಲದಲ್ಲಿತ್ತು. ಹುಲ್ಗಾವಲು ನಿಶ್ಚಲವಾಗಿತ್ತು, ಹವಾ ನಿದ್ದೆ ಮಾಡ್ತಾಯಿದ್ದಳು, ಹುಸೇನಿಯೂ ಕೂಡಾ. ಅಸನಮ್ಮ ಬಾಗಿಲು ಹಾಕೋದಕ್ಕೆ ಮುಂಚೆ, ಹೊರಗೆಲ್ಲಾ ಸರಿಯಿದ್ಯಾಂತ ಪರಿಶೀಲಿಸಲು ಮುಖ್ಯ ಗೇಟಿನ ಹತ್ರ ಬಂದಳು. ಯಾವುದೇ ಆಕೃತಿ ಕಾಣಿಸದಿದ್ದರೂ, ಯಾರೋ ಹುಲ್ಲಿನ ಮ್ಯಾಲೆ ಹಗುರವಾಗಿ ಹೆಜ್ಜೆ ಹಾಕುತ್ತಿರೋ ಚರಚರ ಸಪ್ಪಳ ಮತ್ತು ಹೆಜ್ಜೆ ಸಪ್ಪಳಾಗ್ದಂತೆ ಮತ್ತಷ್ಟೂ ಮೆಲ್ಗೆ ಪ್ರಯತ್ನಿಸ್ತಿರೋದು ಅವಳ ಗಮನಕ್ಕೆ ಬಂತು.

'ಇದಾದ್ರೂ ನನ್ ಗಂಡನಾಗಿದ್ರೆ...'

ಆದ್ರೆ ನಿಸ್ಸಂದೇಹವಾಗಿ ಅದು ಅವಳ ಗಂಡನಾಗಿರ್ಲಿಲ್ಲ!

'ಯಾರ್ ಬಂದಿದ್ದು?'